ಇ ಸಿ ಎ ನಂ. 3/2022
ಪಿ ಡಬ್ಲ್ಯೂ: 1
ದಿನಾಂಕ 08/06/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 1ನೇ ಎದುರುದಾರರ ಪರ: ಶ್ರೀ ಎನ್ ಎಸ್ ವಕೀಲರಿಂದ:

ದಿನಾಂಕ **20/02/2021**ಕ್ಕಿಂತ ಪೂರ್ವದಲ್ಲಿ ನಾನು ಏನು ಕೆಲಸ ಮಾಡುತ್ತಿದ್ದೆ ಎಂದರೆ ಸಾಕ್ಷಿ ವ್ಯವಸಾಯ ಎಂದು ನುಡಿಯುತ್ತಾರೆ. ನನ್ನ ಹೆಸರಿನಲ್ಲಿ ಜಮೀನು ಇದೆ. ನನ್ನ ಜಮೀನಿನಲ್ಲಿ ರಾಗಿ ಹಾಗೂ ಇತರೇ ಬೆಳೆಗಳನ್ನು ಬೆಳೆಯುತ್ತಿದ್ದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ರಾಗಿ ಬೆಳೆ ಕಟಾವು ಮಾಡಲು ನಾನು ಬೇರೆಯವರನ್ನು ಕೆಲಸಕ್ಕೆ ಕರೆದುಕೊಂಡು ಬರುತ್ತಿದ್ದೆ ಎಂದರೆ ಸರಿ. ರಾಗಿ ಕಟಾವು ಮಾಡಲು ಜನ ಕರೆದುಕೊಂಡು ಬರುವುದು ಅದು ಶಾಶ್ವತ ಕೆಲಸವಲ್ಲ, ಅದು ಕೇವಲ ಒಂದು ದಿನದ ಕೆಲಸ ಎಂದರೆ ಸರಿ. 2ನೇ ಎದುರುದಾರರ ಚಿಕ್ಕಪಟ್ಟಣಗೆರೆ ಗ್ರಾಮದವರು. ಅವರು ಸಹ ರಾಗಿ ಬೆಳೆಯುತ್ತಾರೆ ಎಂದರೆ ಸರಿ. ನಮ್ಮ ಜಮೀನಿನ ರಾಗಿ ಕಟಾವಿನ ಸಮಯದಲ್ಲಿ 2ನೇ ಎದುರುದಾರರು ಕೆಲಸಕ್ಕೆ ಬರುತ್ತಾರೆ ಅದೇರೀತಿ ಅವರ ಜಮೀನಿನ ರಾಗಿ ಕಟಾವಿಗೆ ನಾನು ಹೋಗುತ್ತಿದ್ದೆ ಎಂದರೆ ಸರಿ. **20/02/2021** ರಂದು ರಾಗಿ ಕೊಯ್ಯಲು 2ನೇ ಎದುರುದಾರರನೇ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೆಲಸಕ್ಕೆ ನಾನು ಬರುವುದಿಲ್ಲ ಎಂದು ಹೇಳಿದರೂ ಸಹ 2ನೇ ಎದುರುದಾರರು ನನ್ನನ್ನುಬೈಕಿನಲ್ಲಿ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಆ ದಿನ 4 ಜನ ಕೆಲಸಕ್ಕೆ ಹೋಗಿದ್ದೇವು. 4 ಜನರನ್ನು

2 ನೇ ಎದುರುದಾರರೇ ಕೆಲಸಕ್ಕೆ ಕರೆದುಕೊಂಡು ಹೋಗಿದ್ದರು. 2 ನೇ ಎದುರುದಾರರು ಎಷ್ಟು ಕೂಲಿ ಕೊಡುವುದಾಗಿ ಕೆಲಸಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿ ಕೂಲಿಗೆ ಕರೆದುಕೊಂಡು ಹೋಗಿದ್ದರು ಆದರೆ ಕೂಲಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

ರಾಗಿ ಕ್ಲೀನಿಂಗ್ ಮಾಡುವ ಮಿಷನ್ ಬಳಿ ಯಾರು ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ನಮ್ಮ ಊರಿನವರು ಎಂದು ನುಡಿಯುತ್ತಾರೆ. ಆ ಮಿಷನ್ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ರಾಗಿ ಕ್ಲೀನಿಂಗ್ ಮಾಡುವ ಸಮಯದಲ್ಲಿ 2 ನೇ ಎದುರುದಾರರು ಸ್ಥಳದಲ್ಲೇ ಇದ್ದರು ಎಂದರೆ ಸರಿ. ರಾಗಿ ಕ್ಲೀನಿಂಗ್ ಮಿಷನ್ ನಲ್ಲಿ ಕೆಲಸ ಮಾಡುವಾಗ ಅದರ ಬೆಲ್ಟ್ ಪಕ್ಕದಲ್ಲಿ ಹೋಗಬಾರದು ಎನ್ನುವ ವಿಚಾರ ನನಗೆ ಗೊತ್ತಿತ್ತು ಅಲ್ಲವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾಗಾರಾಜುರವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಘಟನೆಯಾದ ನಂತರ ನನ್ನನ್ನು ಆಸ್ಪತ್ರೆಗೆ ನನ್ನನ್ನು ಯಾರು ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿ ನನ್ನ ಮಗಳು ಭವಾನಿ ಎಂದು ನುಡಿಯುತ್ತಾರೆ. ಪೊಲೀಸರಿಗೆ ದೂರನ್ನು ನನ್ನ ಮಗಳೇ ನೀಡಿರುತ್ತಾರೆ. 1 ನೇ ಎದುರುದಾರರು ಬೇರೆ ಊರಿನವರು ಎಂದರೆ ಸರಿ. ನಾನು ಅವರನ್ನು ಯಾವಾಗ ನೋಡಿದ್ದು ಎಂದರೆ ಸಾಕ್ಷಿ ಆಸ್ಪತ್ರೆಗೆ ಹೋಗಿದ್ದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಎದುರುದಾರರು ನನ್ನನ್ನು ಕೆಲಸಕ್ಕೆ ಕರೆದಿಲ್ಲ ಮತ್ತು ಅದರ ಬಗ್ಗೆ ನನ್ನ ಬಳಿ ಮಾತನಾಡಿಲ್ಲ ಎಂದರೆ ಸರಿ. ನಾನು 1 ನೇ ಎದುರುದಾರರ ಕೈ ಕೆಳಗೆ ಕೆಲಸಗಾರನಾಗಿ ಹೋಗಿಲ್ಲ ಎಂದರೆ ಸರಿ. ನಾನು 2 ನೇ ಎದುರುದಾರರ

ಕೈ ಕೆಳಗೆ ಕೆಲಸಗಾರನಾಗಿ ಹೋಗಿದ್ದೆ ಎಂದರೆ ಸರಿ. ನನ್ನ ಮಗಳು ನೀಡಿದ ದೂರಿನ ಆಧಾರದ ಮೇಲೆ ಪೋಲೀಸರು ತನಿಖೆ ಕೈಗೊಂಡು ದೋಷಾರೋಪಣಾ ಪಟ್ಟಿ ಸಲ್ಲಿಸಿ ಅದರಂತೆ ಸಿಸಿ ನಂ.2715/2021 ರಂತೆ ಎದುರುದಾರರ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ನಾನು 1 ನೇ ಎದುರುದಾರರ ವಿರುದ್ಧ ಹೇಳಿಕೆಯನ್ನಾಗಲಿ ದೂರನ್ನಾಗಲಿ ನೀಡಿಲ್ಲ ಎಂದರೆ ಸರಿ. ಕ್ರಿಮಿನಲ್ ಪ್ರಕರಣದಲ್ಲಿ 2 ನೇ ಎದುರುದಾರರು ತನ್ನ ತಪ್ಪನ್ನು ಒಪ್ಪಿಕೊಂಡು ದಂಡ ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಗಿ ಕ್ಲೀನಿಂಗ್ ಮಿಷನ್ ಬಳಿ ಕೆಲಸ ನಡೆಯುವಾಗ ಎಚ್ಚರಿಗೆ ವಹಿಸಬೇಕಾದ ಕರ್ತವ್ಯ 2 ನೇ ಎದುರುದಾರರ ಮೇಲೆ ಇತ್ತು ಎಂದರೆ ಸರಿ. 2 ನೇ ಎದುರುದಾರರು ಸೂಕ್ತ ಎಚ್ಚರಿಕೆ ನೀಡದೆ ನನಗೆ ಅಪಘಾತವಾಗಿರುವುದರಿಂದ ನನಗೆ ಪರಿಹಾರ ನೀಡಲು ಅವರೇ ಬಾದ್ಯರು ಎಂದರೆ ಸರಿ. 2 ನೇ ಎದುರುದಾರರು ನನ್ನನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸಾ ವೆಚ್ಚವನ್ನು ಭರಿಸಿ ಪರಿಹಾರವನ್ನು ಸಹ ನೀಡುವುದಾಗಿ ಹೇಳಿದ್ದರು ಸಹ ಎಂದರೆ ಸಾಕ್ಷಿ ಅವರು ಆಸ್ಪತ್ರೆಯ ಬಳಿ ಬಂದಿರುವುದಿಲ್ಲ ಮತ್ತು ಪರಿಹಾರವನ್ನು ಸಹ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ವೈದ್ಯಕೀಯ ವೆಚ್ಚಕ್ಕಾಗಿ ನಾನು ಹೇಳಿದಷ್ಟು ಹಣ ಖರ್ಚು ಮಾಡಿಲ್ಲ ಎಂದರೆ ಸಾಕ್ಷಿ 10 ಲಕ್ಷ ರೂ ಖರ್ಚು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ರಾಡನ್ನು ತೆಗೆಯ ಬೇಕು ಮತ್ತು ಮತ್ತೊಂದು ಶಸ್ತ್ರ ಚಿಕಿತ್ಸೆಯಾಗಬೇಕು ಎಂದು ನುಡಿಯುತ್ತಾರೆ. ನನ್ನ ಮತ್ತು 1 ನೇ ಎದುರುದಾರರ ನಡುವೆ ಕಾರ್ಮಿಕ ಮತ್ತು ಮಾಲೀಕ

ಸಂಬಂದ ಇಲ್ಲದೆ ಇರುವುದರಿಂದ ಘಟನೆ ಸಂಬಂದಪಟ್ಟಂತೆ 1ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾದ್ಯರಲ್ಲ ಎಂದರೆ ಸರಿ. 1 ಮತ್ತು 2ನೇ ಎದುರುದಾರರು ಪರಸ್ಪರ ಪರಿಚಯ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಗಿ ಕ್ಲೀನಿಂಗ್ ಮಿಷನ್ ನನ್ನು 1ನೇ ಎದುರುದಾರರಿಂದ 2ನೇ ಎದುರುದಾರರು ಪಡೆದುಕೊಂಡು ಹೋಗಿರುವ ವಿಚಾರ ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ರಾಗಿ ಕ್ಲೀನಿಂಗ್ ಮಿಷನ್ ಬೆಲ್ಟ್ ಬಳಿ ಹೋಗಬಾರದೆಂಬ ವಿಚಾರ ನನಗೆ ಗೊತ್ತಿದ್ದರೂ ಸಹ ನನ್ನ ನಿರ್ಲಕ್ಷತನದಿಂದಲೇ ನನಗೆ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿ ನನ್ನ ನಿರ್ಲಕ್ಷತನ ಇಲ್ಲವೆಂದು ನುಡಿಯುತ್ತಾರೆ. ನನಗೆ 1ನೇ ಎದುರುದಾರರು ಪರಿಹಾರ ನೀಡಲು ಬಾದ್ಯರಲ್ಲ, 2ನೇ ಎದುರುದಾರರೇ ನನಗೆ ಪರಿಹಾರವನ್ನು ನೀಡಬೇಕು ಎಂದರೆ ಸರಿ.

ಮರುವಿಚಾರಣೆ: ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.